**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೧೬.೦೩.೨೦೧೬ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೩೨ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೩೨ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಮಾರ್ಚ್ ೧೬, ೨೦೧೬ರ ಬುಧವಾರ ಬೆಳಿಗ್ಗೆ ೧೧.೦೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | |
|---|---|
| ೧. **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. **ಪ್ರೊ. ಕೆ.ಈ. ರಾಧಾಕೃಷ್ಣ,** ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೩. **ಡಾ. ವನಿತಾ ರಾಮಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೪. **ಶ್ರೀ ಕೆ. ಭೀಮಪ್ಪ,** ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೫. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೬. **ಶ್ರೀಮತಿ ಜಯಶ್ರೀ ವಿ. ಕೊರತಿ,** ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೭. **ವಿದ್ವಾನ್ ಸಿದ್ಧಮಲ್ಲ ಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೮. **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | |
|---|---|
| ೧. **ಡಾ. ಮೈಕೆಲ್,** ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೨. **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೩. **ಡಾ. ಕೆ. ಸುಧಾಕರ್,** ಶಾಸಕರು(ಚಿಕ್ಕಬಳ್ಳಾಪುರ), ಬೆಂಗಳೂರು | ಸದಸ್ಯರು |
| ೪. **ಅಪರ ಮುಖ್ಯ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೫. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೬. **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೭. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೮. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೯. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೧೧. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೧೨. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೩. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |
| ೧೪. **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | | |
|---|---|---|
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ 31ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 31ನೇ ಸಭೆಯು ದಿನಾಂಕ: 22.12.2015ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಪ್ರಶಾಸನ ಸಮಿತಿ 31ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **‘ಹಣಕಾಸು ಸಮಿತಿ’ 19 ಮತ್ತು 20ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ‘ಹಣಕಾಸು ಸಮಿತಿ’ 19 ಮತ್ತು 20ನೇ ಸಭೆಗಳು ಕ್ರಮವಾಗಿ ದಿನಾಂಕ: 07.01.2016 ಮತ್ತು ದಿನಾಂಕ: 01.03.2016ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದವು. ಈ ಸಭೆಗಳ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಹಣಕಾಸು ಸಮಿತಿ 19 ಮತ್ತು 20ನೇ ಸಭೆಗಳ ನಡಾವಳಿಗಳನ್ನು ಸಭೆಯು ಅನುಮೋದಿಸಿತು.** |

| | | |
|---|---|---|
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಮೇಲುಕೋಟೆ ಸಂಸ್ಕೃತ ಸಂಶೋಧನಾ ಸಂಸತ್‌ಗೆ ಆಡಳಿತ ಮಂಡಳಿಯನ್ನು ರಚಿಸುವ ಬಗೆಗೆ.**<br>ಸರ್ಕಾರದ ಆದೇಶ ಸಂಖ್ಯೆ: ಇಡಿ 98 ಯುಆರ್‌ಸಿ 2009(ಭಾಗ–4); ದಿನಾಂಕ: 15.12.2015ರ ಅನ್ವಯ ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್ ಅನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡಿಸಿದ್ದು, ಅದರಂತೆ ವಿಶ್ವವಿದ್ಯಾಲಯವು ಅಧಿಸೂಚನೆ (ಸಂಖ್ಯೆ: ಕಸಂವಿ/ಆಡಳಿತ/ ಸಂ.ಸಂ.ಸಂ./2015–16; ದಿನಾಂಕ: 21.12.2015)ಯನ್ನು ಹೊರಡಿಸಿ ಸಂಸ್ಕೃತ ಸಂಶೋಧನಾ ಸಂಸತ್‌ಅನ್ನು ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡಿಸಿಕೊಂಡಿತು. ಸರ್ಕಾರದ ಆದೇಶ ಹಾಗೂ ವಿಶ್ವವಿದ್ಯಾಲಯದ ಅಧಿಸೂಚನೆಯ ಸಂಸ್ಕೃತ ಸಂಶೋಧನ ಸಂಸತ್‌ನ ಚರ–ಸ್ಥಿರಾಸ್ತಿ ಮತ್ತು ಪ್ರಸ್ತುತ ಇರುವ ಯೋಜನೇತರ ಹಾಗೂ ಯೋಜನೆಯ ನೌಕರರ ಸಹಿತವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನಕ್ಕೆ ದಿನಾಂಕ: 06.02.2016ರಂದು ಆಡಳಿತ ನಿರ್ವಹಣೆ/ ನಿಯಂತ್ರಣದ ಜೊತೆ ಅನುದಾನಸಹಿತವಾಗಿ ಅಧೀನಕ್ಕೆ ವಹಿಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಸಂಸ್ಕೃತ ಸಂಶೋಧನಾ ಸಂಸತ್‌ನ ನಿರ್ವಹಣೆಗಾಗಿ ಒಂದು **‘ಆಡಳಿತ ಮಂಡಳಿ’**ಯನ್ನು ರಚಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಕುಲಪತಿಗಳು ಆಡಳಿತ ಮಂಡಳಿಯನ್ನು ನಿಯಮಾನುಸಾರ ರಚಿಸಬಹುದೆಂದು ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **‘ಕಟ್ಟಡ ಸಲಹಾ ಸಮಿತಿ’ಯನ್ನು ಪುನಾರಚಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೆಂಗಳೂರು ಮತ್ತು ಮೈಸೂರು ಘಟಕ ಕಾಲೇಜುಗಳ ಆವರಣದಲ್ಲಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ‘ಕಟ್ಟಡ ಸಲಹಾ ಸಮಿತಿ’ಯನ್ನು ರಚಿಸಲಾಗಿತ್ತು. ಪ್ರಸ್ತುತ, ವಿಶ್ವವಿದ್ಯಾಲಯದ ಆಡಳಿತ ಕಟ್ಟಡಗಳ (ಚಾಮರಾಜಪೇಟೆ ಆವರಣ) ನಿರ್ಮಾಣ ಮತ್ತು ರಾಮನಗರದ ಜಮೀನಿನಲ್ಲಿ ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ, ‘ಕಟ್ಟಡ ಸಲಹಾ ಸಮಿತಿ’ಯನ್ನು ಪುನಾರಚಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಕಟ್ಟಡ ಸಲಹಾ ಸಮಿತಿಗೆ ಕುಲಪತಿಗಳು, ಕುಲಸಚಿವರು, ಪ್ರಶಾಸನ ಸಮಿತಿ ಮತ್ತು ಪ್ರಶಿಕ್ಷಣ ಪರಿಷತ್ತಿನ ತಲಾ ಒಬ್ಬ ಸದಸ್ಯರು, ಹಣಕಾಸು ಅಧಿಕಾರಿ, ಜಿಲ್ಲಾಧಿಕಾರಿಯ ಪ್ರತಿನಿಧಿ, ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರಿಗೆ ಕಡಿಮೆಯಿಲ್ಲದ ಅಧಿಕಾರಿಯನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲು ಸಭೆಯು ಅನುಮತಿಯನ್ನು ನೀಡಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ಕಾರ್ಯನಿರ್ವಾಹಕ ಅಭಿಯಂತರರನ್ನು ನೇಮಿಸಿಕೊಳ್ಳುವ ಬಗೆಗೆ.**<br>ಸರ್ಕಾರದ ಆದೇಶ ಸಂಖ್ಯೆ: ಇಡಿ 213 ಯುಆರ್‌ಸಿ 2011; ದಿನಾಂಕ: 25.05.2012ರ ಅನ್ವಯ ಅನುಮೋದನೆಗೊಂಡಿರುವ ‘ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮ’ಕ್ಕೆ ಅನುಸಾರವಾಗಿ ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆಯ ಮೇರೆಗೆ ‘ಕಾರ್ಯನಿರ್ವಾಹಕ ಅಭಿಯಂತರ’ರನ್ನು ನೇಮಕ ಮಾಡಿಕೊಳ್ಳಬಹುದಾಗಿದೆ. ವಿಶ್ವವಿದ್ಯಾಲಯದ ವಿವಿಧ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಇವುಗಳ ಉಸ್ತುವಾರಿಗಾಗಿ ‘ಕಾರ್ಯನಿರ್ವಾಹಕ ಅಭಿಯಂತರ’ರನ್ನು ನಿಯೋಜನೆ ಮೇರೆಗೆ ನೇಮಕ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗೆ ಅಧಿಕೃತ ಪತ್ರ ಬರೆದು, ಕಾರ್ಯನಿರ್ವಾಹಕ ಅಭಿಯಂತರರನ್ನು ನೇಮಿಸಿಕೊಳ್ಳುವಂತೆ ಸಭೆಯು ನಿರ್ಣಯಿಸಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಯುಜಿಸಿಯ ‘12ಬಿ’ ಮಾನ್ಯತೆ ಪಡೆಯುವ ಸಂಬಂಧ ಇನ್ನೂ ಎರಡು ಹೊಸ ವಿಭಾಗಗಳನ್ನು ಪ್ರಾರಂಭಿಸುವ ಅವಶ್ಯಕತೆಯಿರುತ್ತದೆ. ಈ ಹಿನ್ನೆಲೆಯಲ್ಲಿ ಎರಡು ವಿಭಾಗಗಳನ್ನು ಪ್ರಾರಂಭಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯವು ಈ ದಿಕ್ಕಿನಲ್ಲಿ ಮುಂದುವರೆಯಲು ಹಾಗೂ ತ್ವರಿತವಾಗಿ ಯುಜಿಸಿಯ ‘12ಬಿ’ ಮಾನ್ಯತೆ ಪಡೆಯಲು ಕ್ರಮವಹಿಸಬೇಕೆಂದು ಸಭೆಯು ಸೂಚಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಯುಜಿಸಿ/ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010; ದಿನಾಂಕ: 25.01.2011ರಲ್ಲಿ 133 ಬೋಧಕ–ಬೋಧಕೇತರ ಹುದ್ದೆಗಳು ಸೃಜನೆಗೊಂಡಿವೆ. ದಿನಾಂಕ: 16.06.2012ರಂದು ನಡೆದ ಹಣಕಾಸು ಸಮಿತಿ 5ನೇ ಸಭೆ ಹಾಗೂ ದಿನಾಂಕ: 16.06.2012ರಂದು ನಡೆದ ಪ್ರಶಾಸನ ಸಮಿತಿ 5ನೇ ಸಭೆಯ ನಿರ್ಣಯದಂತೆ, ಸೃಜನೆಗೊಂಡಿರುವ ಒಟ್ಟು 133 ಬೋಧಕ–ಬೋಧಕೇತರ ಹುದ್ದೆಗಳ ಪೈಕಿ ಮೊದಲ ಹಂತದಲ್ಲಿ ಕೆಳಕಂಡ 61 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗಿತ್ತು. ಇವುಗಳಲ್ಲಿ, ಒಟ್ಟು 53 ಯುಜಿಸಿ/ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳನ್ನು (ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು: 17; ರಾಜ್ಯವೇತನ ಶ್ರೇಣಿಯ ಬೋಧಕ ಹುದ್ದೆಗಳು: 10 ಹಾಗೂ ರಾಜ್ಯವೇತನ ಶ್ರೇಣಿಯ ಬೋಧಕೇತರ ಹುದ್ದೆಗಳು: 26) ಭರ್ತಿ ಮಾಡಿಕೊಳ್ಳಲಾಗಿದೆ. |

| ಕ್ರ. ಸಂ. | ಪದನಾಮ | ಶ್ರೇಣಿ | ವೇತನಶ್ರೇಣಿ | ಅಧಿಸೂಚನೆ ಹೊರಡಿಸಿದ ಹುದ್ದೆಗಳು | ಭರ್ತಿ ಮಾಡಿ ಕೊಂಡಿರುವ ಹುದ್ದೆಗಳು | ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿರುವ ಹುದ್ದೆಗಳು |
|---|---|---|---|---|---|---|
| **I ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | |
| 01. | ಪ್ರಾಧ್ಯಾಪಕರು | ಎ | 37400–67400+AGP | 03 | 02 | 01 (ಎಸ್‌ಟಿ) |
| 02. | ಸಹಪ್ರಾಧ್ಯಾಪಕರು | ಎ | 37400–67400+ AGP | 06 | 04 | 02 (ಎಸ್‌ಸಿ, ಸಾಮಾನ್ಯ) |
| 03. | ಸಹಾಯಕ ಪ್ರಾಧ್ಯಾಪಕರು | ಎ | 15600–39100+ AGP | 12 | 11 | 01 (ಪ್ರವರ್ಗ 2ಬಿ) |
| **ಒಟ್ಟು** | | | | **21** | **17** | **04** |
| **II ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು** | | | | | | |
| 01. | ಗ್ರಂಥಪಾಲಕ | ಎ | 37400–67400+AGP | 01 | – | 01* |
| **ಒಟ್ಟು** | | | | **01** | **–** | **01*** |
| **III ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | |
| 01. | ಯೋಜನಾ ಸಹಾಯಕರು | ಬಿ | 21600–40050 | 10 | 10 | – |
| **ಒಟ್ಟು** | | | | **10** | **10** | |
| **IV ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು** | | | | | | |
| 01. | ಉಪ ಕುಲಸಚಿವರು | ಎ | 40050–56550 | 01 | 01 | – |
| 02. | ಉಪ ನಿರ್ದೇಶಕರು | ಎ | 36300–53850 | 01 | 01 | – |
| 03. | ಸಹಾಯಕ ಕುಲಸಚಿವರು | ಎ | 28100–50100 | 01 | 01 | – |
| 04. | ಸಹಾಯಕ ನಿರ್ದೇಶಕರು | ಎ | 28100–50100 | 01 | 01 | – |
| 05. | ಶಾಖಾಧಿಕಾರಿ | ಬಿ | 21600–40050 | 01 | 01 | – |
| 06. | ಕಂಪ್ಯೂಟರ್ ಆಪರೇಟರ್ | ಬಿ | 21600–40050 | 01 | 01 | – |
| 07. | ಸಹಾಯಕರು | ಸಿ | 16000–29600 | 01 | 01 | – |
| 08. | ಗ್ರಂಥಾಲಯ ಸಹಾಯಕರು | ಸಿ | 16000–29600 | 01 | 01 | – |
| 09. | ವಾಹನ ಚಾಲಕರು | ಸಿ | 12500–24000 | 02 | 02 | – |
| 10. | ಕಿರಿಯ ಸಹಾಯಕರು | ಸಿ | 11600–21000 | 02 | 02 | – |
| 11. | ಟೆಲಿಫೋನ್ ಆಪರೇಟರ್ | ಸಿ | 11600–21000 | 01 | – | 01 (ಎಸ್‌ಸಿ) |
| 12. | ವಿಶ್ರಾಂತಿಗೃಹ ಮೇಲ್ವಿಚಾರಕರು | ಡಿ | 10400–16400 | 01 | 01 | – |
| 13. | ಅಡಿಗೆ ಸಹಾಯಕರು | ಡಿ | 9600–14550 | 01 | 01 | – |
| 14. | ಕಾವಲುಗಾರರು | ಡಿ | 9600–14550 | 04 | 04 | – |
| 15. | 'ಡಿ' ಗ್ರೂಪ್ | ಡಿ | 9600–14550 | 08 | 08 | – |
| **ಒಟ್ಟು** | | | | **27** | **26** | **01** |

ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು 04; ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು 01 ಹಾಗೂ ರಾಜ್ಯ ವೇತನಶ್ರೇಣಿಯ ಬೋಧಕೇತರ 01 ಹುದ್ದೆ ಸೇರಿದಂತೆ ಒಟ್ಟು 06 ಹುದ್ದೆಗಳು ಇನ್ನೂ ಖಾಲಿ ಉಳಿದಿವೆ.

ವಿಶ್ವವಿದ್ಯಾಲಯಕ್ಕೆ ಎರಡನೇ ಹಂತದಲ್ಲಿ ಕೆಲವು ಬೋಧಕ–ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದು ಅವಶ್ಯವಾಗಿದ್ದು, ಇದರೊಂದಿಗೆ ಈಗಾಗಲೇ ಅಧಿಸೂಚನೆ ಹೊರಡಿಸಿ, ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿರುವ 06 ಹುದ್ದೆಗಳೂ ಸೇರಿದಂತೆ ಯುಜಿಸಿ ವೇತನಶ್ರೇಣಿಯ 14 ಬೋಧಕ; 03 ಬೋಧಕೇತರ ಹಾಗೂ ರಾಜ್ಯ ವೇತನಶ್ರೇಣಿಯ 08 ಬೋಧಕ ಮತ್ತು 12 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕಾಗಿದೆ. ಭರ್ತಿ ಮಾಡಿಕೊಳ್ಳಬೇಕಾಗಿರುವ ಯುಜಿಸಿ/ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ವಿವರ ಈ ಕೆಳಕಂಡಂತಿವೆ:

| ಕ್ರ. ಸಂ. | ಪದನಾಮ | ಶ್ರೇಣಿ | ವೇತನಶ್ರೇಣಿ | ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿರುವ ಹುದ್ದೆಗಳು | 2ನೇ ಹಂತದಲ್ಲಿ ಭರ್ತಿ ಮಾಡಿಕೊಳ್ಳುವ ಹುದ್ದೆಗಳು | ಅಧಿಸೂಚನೆ ಹೊರಡಿಸ ಬೇಕಾದ ಒಟ್ಟು ಹುದ್ದೆಗಳು | ವಾರ್ಷಿಕ ವೇತನದ ಅಂದಾಜು ಮೊತ್ತ |
|---|---|---|---|---|---|---|---|
| **I ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | | |
| 01. | ಪ್ರಾಧ್ಯಾಪಕರು | ಎ | 37400–67400 +AGP | 01 (ST) | 02 (GM-01; Cat I-01) | 03 | 4765320.00 |
| 02. | ಸಹಪ್ರಾಧ್ಯಾಪಕರು | ಎ | 37400–67400 + AGP | 02 (SC-01; | 04 (IIA-01; | 06 | 8347392.00 |

| | | | | | | | |
|---|---|---|---|---|---|---|---|
| | | | | GM-01) | GM-02; SC-01) | | |
| 03. | ಸಹಾಯಕ ಪ್ರಾಧ್ಯಾಪಕರು | ಎ | 15600–39100 + AGP | 01 (IIB) | 08 (GM-04; SC-01; IIA-01; IIIA-01; IIIB-01) | 09 | 5808672.00 |
| ಒಟ್ಟು | | | | **04** | **14** | **18** | **18921384.00** |
| **II ಯುಜಿಸಿ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು** | | | | | | | |
| 01. | ಗ್ರಂಥಪಾಲಕ | ಎ | 37400–67400+AGP | 01(UR) | - | 01 | 1421112.00 |
| 02. | ಸಹಾಯಕ ಗ್ರಂಥಪಾಲಕ | ಎ | 15600–39100+ AGP | - | 02 (SC-01; GM-01) | 02 | 1300416.00 |
| ಒಟ್ಟು | | | | **01** | **01** | **03** | **2721528.00** |
| **III ರಾಜ್ಯ ವೇತನಶ್ರೇಣಿಯ ಬೋಧಕ ಹುದ್ದೆಗಳು** | | | | | | | |
| 01. | ಯೋಜನಾ ಸಹಾಯಕರು | ಬಿ | 21600–40050 | - | 08 (SC-01; GM-04; IIA-01; IIB-01; IIIA-01) | 08 | 3408000.00 |
| ಒಟ್ಟು | | | | **-** | **08** | **08** | **3408000.00** |
| **IV ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು** | | | | | | | |
| 01. | ಉಪ ನಿರ್ದೇಶಕರು | ಎ | 36300–53850 | - | 01 (GM) | 01 | 748704.00 |
| 02. | ಸಿಸ್ಟಂ ಅನಲಿಸ್ಟ್ | ಎ | 36300–53850 | - | 01 (GM) | 01 | 712656.00 |
| 03. | ಸಹಾಯಕ ನಿರ್ದೇಶಕರು | ಎ | 28100–50100 | - | 01 (GM) | 01 | 552756.00 |
| 04. | ಕಂಪ್ಯೂಟರ್ ಪ್ರೋಗ್ರಾಮರ್ | ಎ | 28100–50100 | - | 01 (UR) | 01 | 552756.00 |
| 05. | ಸಹಾಯಕರು | ಸಿ | 16000–29600 | - | 01 (GM) | 01 | 332448.00 |
| 06. | ಶೀಘ್ರಲಿಪಿಕಾರರು | ಸಿ | 16000–29600 | - | 01 (UR) | 01 | 332448.00 |
| 07. | ಗ್ರಂಥಾಲಯ ಸಹಾಯಕರು | ಸಿ | 16000–29600 | - | 01 (GM) | 01 | 332448.00 |
| 08. | ಡಾಟಾ ಎಂಟ್ರಿ ಆಪರೇಟರ್ | ಸಿ | 14550–26700 | - | 02 (SC-01; GM-01) | 02 | 577056.00 |
| 09. | ಕಿರಿಯ ಸಹಾಯಕರು | ಸಿ | 11600–21000 | - | 01 (ST) | 01 | 231000.00 |
| 10. | ಟೆಲಿಫೋನ್ ಆಪರೇಟರ್ | ಸಿ | 11600–21000 | 01 (SC; PH) | 01 (GM) | 02 | 462000.00 |
| ಒಟ್ಟು | | | | **01** | **11** | **12** | **4834272.00** |

| | | |
|---|---|---|
| | ನಿರ್ಣಯ | **ಯುಜಿಸಿ ಹಾಗೂ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಬಹುದೆಂದು ಸಭೆಯು ತೀರ್ಮಾನಿಸಿತು.** |
| ವಿಷಯ 08 | **ವಿಷಯ ಮತ್ತು ಟಿಪ್ಪಣಿ** | **'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ಕ್ಕೆ ತಿದ್ದುಪಡಿಯನ್ನು ಮಾಡುವ ಬಗೆಗೆ.**<br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2011ರ (2011ರ ಫೆಬ್ರವರಿ 4ರಂದು ಘನತೆವೆತ್ತ ರಾಜ್ಯಪಾಲರಿಂದ ಅಂಕಿತಗೊಂಡಿದೆ) ಅನ್ವಯ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ಕ್ಕೆ ಕೆಲವು ಬದಲಾವಣೆಯನ್ನು ಅಳವಡಿಸಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ದಿನಾಂಕ: 22.12.2015ರಂದು ನಡೆದ 31ನೇ ಸಭೆಯಲ್ಲಿ ಮಂಡಿಸಲಾಗಿತ್ತು. ಸಭೆಯು "ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ಕ್ಕೆ ತಿದ್ದುಪಡಿಯನ್ನು ಸರ್ಕಾರಕ್ಕೆ ನಿಯಮಾನುಸಾರ ಶಿಫಾರಸ್ಸು ಮಾಡಲು ಸಭೆಯು ಅಂಗೀಕರಿಸಿತು. ಈ ಬಗ್ಗೆ ಅಧಿನಿಯಮ ಸಮಿತಿಯ ಮೂಲಕ ಕ್ರಮವಹಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು." ಅದರಂತೆ, ಪರಿನಿಯಮ ಪರಿಶೀಲನಾ ಸಮಿತಿಯು ದಿನಾಂಕ: 01.03.2016ರ ಮಂಗಳವಾರ ಪೂರ್ವಾಹ್ನ 11.00 ಗಂಟೆಗೆ ಸಭೆ ಸೇರಿ, ಅಧಿನಿಯಮಕ್ಕೆ ತಿದ್ದುಪಡಿಗಳನ್ನು ಮಾಡಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತದೆ. ಈ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |

| | | |
|---|---|---|
| | ನಿರ್ಣಯ | **ಸಭೆಯು ಅಧಿನಿಯಮ ಪರಿಶೀಲನಾ ಸಮಿತಿಯ ಶಿಫಾರಸ್ಸುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಒಪ್ಪಿಗೆ ನೀಡಿತು ಹಾಗೂ ತಿದ್ದುಪಡಿಗಳನ್ನು ಒಳಗೊಂಡ ಅಧಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಒಪ್ಪಿಗೆಯನ್ನು ಸೂಚಿಸಿತು.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ಕುಲಪತಿಗಳು ಹಾಗೂ ಕುಲಸಚಿವರ ಅವಲಂಬಿತರಿಗೆ ವೈದ್ಯಕೀಯ ವೆಚ್ಚವನ್ನು ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಾದ ಕುಲಪತಿಗಳು ಮತ್ತು ಅವರ ಅವಲಂಬಿತರು ಹಾಗೂ ಕುಲಸಚಿವರು ಮತ್ತು ಅವರ ಅವಲಂಬಿತರಿಗೆ 'KARNATAKA GOVERNMENT SERVANTS' (MEDICAL ATTENDANCE) RULES, 1963 (As provided by DPAR in their U.O. Note No. DPAR 250 SENIF 2006, dated: 29.03.2006)'ರ ನಿಯಮಾನುಸಾರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ನಿಯಮಾನುಸಾರ ಕುಲಪತಿಗಳು ಹಾಗೂ ಕುಲಸಚಿವರ ಅವಲಂಬಿತರಿಗೆ ವೈದ್ಯಕೀಯ ವೆಚ್ಚವನ್ನು ನೀಡಬಹುದೆಂದು ಸಭೆಯು ತೀರ್ಮಾನಿಸಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ಯುಜಿಸಿ/ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಸಿಬ್ಬಂದಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಬಗೆಗೆ.**<br>ಪ್ರಶಾಸನ ಸಮಿತಿ 26ನೇ ಸಭೆಯ ನಿರ್ಣಯದಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ/ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಸಿಬ್ಬಂದಿಗಳಿಗೆ ವೈದ್ಯಕೀಯ ವಿಮಾ ಸೌಲಭ್ಯ ನೀಡಲು ಅನುಮತಿ ನೀಡುವಂತೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿತ್ತು. ಆದರೆ, ಸದರಿ ವಿಷಯ ಕುರಿತಂತೆ ವಿಶ್ವವಿದ್ಯಾಲಯದ ಹಂತದಲ್ಲಿಯೇ ನಿಯಮಾನುಸಾರ/ಕಾಯ್ದೆಯನ್ವಯ ಅಗತ್ಯ ಕ್ರಮ ವಹಿಸುವಂತೆ ಪತ್ರಮುಖೇನ (ಸಂಖ್ಯೆ: ಇಡಿ 407 ಯುಎನ್ಇ 2015; ದಿನಾಂಕ: 16.02.2016) ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, 'KARNATAKA GOVERNMENT SERVANTS' (MEDICAL ATTENDANCE) RULES, 1963 (As provided by DPAR in their U.O. Note No. DPAR 250 SENIF 2006, dated: 29.03.2006)'ರ ಅನ್ವಯ ಸಿಬ್ಬಂದಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡುವ ಬಗೆಗೆ ಕೂಲಂಕಷವಾಗಿ ಚರ್ಚಿಸಿ, ನೌಕರರಿಗೆ ಮಾತ್ರ ನೀಡುವಂತೆ ಹಾಗೂ ಗರಿಷ್ಠ ಮಟ್ಟವನ್ನು ನಿರ್ಧರಿಸುವಂತೆ ಸೂಚಿಸಿತು.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **'ವಿದ್ಯಾರ್ಥಿಗಳ ಆಪ್ತಸಲಹಾ ಕೇಂದ್ರ'ವನ್ನು ಸ್ಥಾಪಿಸುವ ಬಗೆಗೆ.**<br>ವಿಶ್ವವಿದ್ಯಾಲಯ ಅನುದಾನ ಆಯೋಗವು ಉನ್ನತ ಶಿಕ್ಷಣದಲ್ಲಿ ಸುಧಾರಣೆಗಳನ್ನು ತರುವ ಸಂಬಂಧ ಅನೇಕ ಉಪಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ದಿನಾಂಕ: 27.01.2016ರಂದು ಯುಜಿಸಿಯ ಕಾರ್ಯದರ್ಶಿಗಳು ವಿಶ್ವವಿದ್ಯಾಲಯಕ್ಕೆ ಪತ್ರಿಸಿದ್ದು, 'ವಿದ್ಯಾರ್ಥಿಗಳ ಆಪ್ತಸಲಹಾ ಕೇಂದ್ರ'ವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸೂಚಿಸಿರುತ್ತಾರೆ. ಈ ಕೇಂದ್ರದಲ್ಲಿ ನುರಿತ ಮನಃಶಾಸ್ತ್ರಜ್ಞರ ಸೇವೆಯನ್ನು ಅವಶ್ಯಕತೆಗೆ ಅನುಸಾರವಾಗಿ ಪಡೆಯಬಹುದೆಂದು ಸೂಚಿಸಿರುತ್ತಾರೆ. 'ವಿದ್ಯಾರ್ಥಿಗಳ ಆಪ್ತಸಲಹಾ ಕೇಂದ್ರ'ವನ್ನು ಸ್ಥಾಪಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯ ಅನುದಾನ ಆಯೋಗದ ಸೂಚನೆಯಂತೆ, ವಿಶ್ವವಿದ್ಯಾಲಯದಲ್ಲಿ 'ವಿದ್ಯಾರ್ಥಿಗಳ ಆಪ್ತಸಲಹಾ ಕೇಂದ್ರ'ವನ್ನು ಸ್ಥಾಪಿಸಲು ಕ್ರಮವಹಿಸುವಂತೆ ಸಭೆಯು ಸೂಚಿಸಿತು.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **'ಉದ್ಯೋಗ ಸಲಹಾ ಕೇಂದ್ರ'ವನ್ನು ಸ್ಥಾಪಿಸುವ ಬಗೆಗೆ.**<br>ದಿನಾಂಕ: 30.05.2015ರಂದು ನಡೆದ ಪ್ರಶಾಸನ ಸಮಿತಿ 26ನೇ ಸಭೆಯಲ್ಲಿ ಉದ್ಯೋಗ ಸಲಹಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ನಿರ್ಣಯವನ್ನು ಕೈಗೊಳ್ಳಲಾಗಿತ್ತು. ಈ ನಿರ್ಣಯವನ್ನು ಅನುಷ್ಠಾನಗೊಳಿಸುವ ಸಂಬಂಧ ಸಮಿತಿಯನ್ನು ರಚಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **'ಉದ್ಯೋಗ ಸಲಹಾ ಕೇಂದ್ರ'ವನ್ನು ಸ್ಥಾಪಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ಡಾ. ವಿ. ಗಿರೀಶ್‌ಚಂದ್ರ, ಪ್ರಾಧ್ಯಾಪಕರು, ಭಾಷಾನಿಕಾಯ –ಇವರ ವೇತನಶ್ರೇಣಿಯನ್ನು ನಿಗದಿಪಡಿಸಿ, ಬಾಕಿವೇತನವನ್ನು ಪಾವತಿಸುವ ಬಗೆಗೆ.**<br>ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 111 ಯುಎನ್ಇ 2014; ದಿನಾಂಕ: 16.01.2016ರ ಅನ್ವಯ ದಿನಾಂಕ: 01.01.2006ರ ನಂತರ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿ ಹೊಂದಿರುವ ಪ್ರಾಧ್ಯಾಪಕರುಗಳ ಮೂಲವೇತನವನ್ನು ರೂ. 43000/–ಗಳಿಗೆ ಕಡಿಮೆಯಿಲ್ಲದಂತೆ ನಿಗದಿಪಡಿಸಲು ಒಪ್ಪಿಗೆಯನ್ನು ಸೂಚಿಸಿದ್ದು, ಅದರಂತೆ ದಿನಾಂಕ: 18.06.2013ರಿಂದ ಭಾಷಾನಿಕಾಯದ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. |

| | | |
|---|---|---|
| | | ವಿ. ಗಿರೀಶ್‌ಚಂದ್ರ –ಇವರ ರೂ. 37400–67000+ಎಜಿಪಿ ರೂ. 10,000/– ವೇತನಶ್ರೇಣಿಯಲ್ಲಿ ಮೂಲವೇತನವನ್ನು ರೂ. 43000/–ಗಳಿಗೆ ಪುನರ್‌ನಿಗದಿಪಡಿಸಲು ಹಾಗೂ ಈ ಮೂಲವೇತನದ ಅನ್ವಯ ಬಾಕಿ ವೇತನವನ್ನು ಪಾವತಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಡಾ. ವಿ. ಗಿರೀಶ್‌ಚಂದ್ರ ಅವರಿಗೆ ಮೂಲವೇತನವನ್ನು ಪುನರ್‌ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ, ಇತರೆ ವಿಶ್ವವಿದ್ಯಾಲಯಗಳಲ್ಲಿ ಕ್ರಮಕೈಗೊಂಡಿರುವಂತೆ ನಿಯಮಾನುಸಾರ ಕ್ರಮವಹಿಸಲು ಸಭೆಯು ಸೂಚಿಸಿತು.** |
| ವಿಷಯ 14 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2012–13, 2013–14 ಹಾಗೂ 2014–15ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮುದ್ರಿಸುವ ಬಗೆಗೆ.**<br>ಸರ್ಕಾರಿ ಲೆಕ್ಕಪರಿಶೋಧಕರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2012–13, 2013–14 ಹಾಗೂ 2014–15ನೇ ಸಾಲಿನ ಲೆಕ್ಕಪತ್ರಗಳನ್ನು ಪರಿಶೀಲಿಸಿ, ಲೆಕ್ಕಪರಿಶೋಧನ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ, ಲೆಕ್ಕಪರಿಶೋಧನಾ ವರದಿಯನ್ನು ಮುದ್ರಿಸಿ ನಿಯಮಾನುಸಾರ ಕರ್ನಾಟಕ ವಿಧಾನಮಂಡಲದಲ್ಲಿ ಮಂಡಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2012–13, 2013–14 ಹಾಗೂ 2014–15ನೇ ಸಾಲಿನ ಲೆಕ್ಕಪರಿಶೋಧನ ವರದಿಯನ್ನು ಮುದ್ರಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ, ವರದಿಯ ಬಗ್ಗೆ ವಿಷಯಗಳಿದ್ದರೆ ವಿಶ್ವವಿದ್ಯಾಲಯಕ್ಕೆ ತಿಳಿಸಲು ಹತ್ತು ದಿನಗಳ ಕಾಲಾವಕಾಶ ಮಾನ್ಯ ಸದಸ್ಯರುಗಳು ಕೇಳಿದರು. ಈ ಅಂಶಕ್ಕೆ ಅಧ್ಯಕ್ಷರು ಒಪ್ಪಿಗೆ ಸೂಚಿಸಿದರು.** |
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **ಶ್ರೀ ಮೇಧಾದಕ್ಷಿಣಾಮೂರ್ತಿ ವೇದ ಭವನ ಸಂಸ್ಕೃತ ಕಾಲೇಜು, ಗೋಕರ್ಣ –ಇಲ್ಲಿನ ಬೋಧಕ–ಬೋಧಕೇತರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗೆಗೆ.**<br>ಶ್ರೀ ಮೇಧಾದಕ್ಷಿಣಾಮೂರ್ತಿ ವೇದ ಭವನ ಸಂಸ್ಕೃತ ಕಾಲೇಜು, ಗೋಕರ್ಣ –ಇಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಪದೋನ್ನತಿ ಬಡ್ತಿ ಮತ್ತು ವರ್ಗಾವಣೆ ಕಾರಣಗಳಿಂದಾಗಿ ತೆರವಾಗಿರುವ 21 ಬೋಧಕ ಹುದ್ದೆಗಳು ಮತ್ತು 01 ಬೋಧಕೇತರ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 18.01.2016ರ ತ್ರಿಸದಸ್ಯ ಸಮಿತಿಯು ಭೇಟಿ ನೀಡಿ, ಪರಿಶೀಲನಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ಈ ವರದಿಯ ಶಿಫಾರಸ್ಸಿನನ್ವಯ ಖಾಲಿ ಇರುವ ಬೋಧಕ–ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ ಮುಂದಿನ ಕ್ರಮ ವಹಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಖಾಲಿ ಇರುವ ಬೋಧಕ–ಬೋಧಕೇತರ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸುವಂತೆ ಸಭೆಯು ತೀರ್ಮಾನಿಸಿತು.** |
| ವಿಷಯ 16 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅಧಿಕ ಪ್ರಭಾರದಲ್ಲಿರುವ ನೌಕರರಿಗೆ ಪ್ರಭಾರಭತ್ಯೆಯನ್ನು ನೀಡುವ ಬಗೆಗೆ.**<br>ಶ್ರೀ ಮಂಜುನಾಥ ಕೋಟಿ, ಕಾವಲುಗಾರ –ಇವರನ್ನು ಆದೇಶ ಸಂಖ್ಯೆ ಕಸಂವಿ/ಹ.ಆ.ನೇ–01/2012–13/1; ದಿನಾಂಕ: 22.02.2014ರ ಪ್ರಕಾರ ಹಣಕಾಸು ಅಧಿಕಾರಿಗಳ ವಾಹನ ಚಾಲಕರಾಗಿ ಹೆಚ್ಚುವರಿ ಪ್ರಭಾರ ಕೆಲಸ ನಿರ್ವಹಿಸುವಂತೆ ಆದೇಶಿಸಲಾಗಿರುತ್ತದೆ. ಅದರಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅಧಿಕ ಪ್ರಭಾರದಲ್ಲಿರುವ ನೌಕರರಿಗೆ ನಿಯಮಾನುಸಾರ ಪ್ರಭಾರಭತ್ಯೆಯನ್ನು ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ನೌಕರನು ಕಾವಲುಗಾರನಾಗಿ ಒಂದು ಪಾಳಿಯಲ್ಲಿ, ಚಾಲಕನಾಗಿ ಮತ್ತೊಂದು ಪಾಳಿಯಲ್ಲಿ ಕೆಲಸ ಮಾಡಿದ್ದರೆ ವಿಶೇಷ ಸೌಲಭ್ಯವನ್ನು ನೀಡಬಹುದಿತ್ತು. ಆದರೆ, ಅಧಿಕಾರಿಗಳು ಕೆಲಸದ ವೇಳೆಯಲ್ಲಿ ಬೇರೊಂದು ಕೆಲಸವನ್ನು ನೌಕರಿಗೆ ನೀಡಿದರೆ, ಅದನ್ನು ನಿರ್ವಹಿಸುವುದು ನೌಕರರ ಕೆಲಸವಾದ್ದರಿಂದ, ವಿಶೇಷ ಸೌಲಭ್ಯ ನೀಡಲು ಬರುವುದಿಲ್ಲ ಎಂದು ಸಭೆಯು ತೀರ್ಮಾನಿಸಿತು.** |
| ವಿಷಯ 17 | ವಿಷಯ ಮತ್ತು ಟಿಪ್ಪಣಿ | **ಶ್ರೀ ರಂಗಸ್ವಾಮಿ ಆರ್., ಕಾವಲುಗಾರ –ಇವರು ಅನಧಿಕೃತ ಗೈರುಹಾಜರಾಗಿರುವ ಬಗೆಗೆ.**<br>ಶ್ರೀ ರಂಗಸ್ವಾಮಿ ಆರ್., 'ಗ್ರೂಪ್ ಡಿ' ನೌಕರ (ಕಾವಲುಗಾರ) –ಇವರು ದಿನಾಂಕ: 11.12.2012ರಂದು ಸೇವೆಗೆ ಸೇರಿದ್ದು, ಇವರು ತಮ್ಮ ಸೇವಾವಧಿಯಲ್ಲಿ ದಿನಾಂಕ: 23.02.2016ರ ವರೆಗೆ ಒಟ್ಟು 123 ದಿನಗಳ ಅನಧಿಕೃತ ಗೈರುಹಾಜರಾಗಿರುತ್ತಾರೆ. ಇವರ ಸೇವೆಯಲ್ಲಿ ಅನಧಿಕೃತ ಗೈರುಹಾಜರಾಗಿರುವುದನ್ನು EL, HPL ಆಗಿ ಬದಲಾಯಿಸಿಕೊಂಡಿರುವುದಲ್ಲದೆ, LWP ಆಗಿಯೂ Convert ಮಾಡಿಕೊಂಡಿರುತ್ತಾರೆ. ಸದರಿ ನೌಕರರ ಈ ರೀತಿಯ ವರ್ತನೆಯು ಉದ್ಧಟತನವಾಗಿರುವುದಲ್ಲದೆ ಬೇಜವಾಬ್ದಾರಿಯಾಗಿರುತ್ತದೆ. ಇದರಿಂದ ವಿಶ್ವವಿದ್ಯಾಲಯದ ಚಟುವಟಿಕೆಗಳಿಗೆ ತೊಂದರೆ ಆಗಿರುತ್ತದೆ. ಇವರಿಗೆ KCSR ಹಾಗೂ CCA ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ಅಂತಿಮ ನೋಟೀಸ್ ನೀಡಲು ಹಾಗೂ ಸದರಿ ನೋಟೀಸ್ ನೀಡಿದ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಬಹುದಾಗಿದೆ. ಜೊತೆಗೆ ಇವರ ಒಂದು ವಾರ್ಷಿಕ ವೇತನಬಡ್ತಿಯನ್ನು ತಡೆಹಿಡಿಯಬಹುದಾಗಿದೆ. ಅಲ್ಲದೇ, |

| | | |
|---|---|---|
| | | ಇವರು ಇದುವರೆವಿಗೂ ಗೈರುಹಾಜರಾಗಿರುತ್ತಾರೆ. ಈ ಗೈರುಹಾಜರಿಯ ಅವಧಿ ನಾಲ್ಕು ತಿಂಗಳು ಮೀರಿದಲ್ಲಿ ಸೇವೆಯಿಂದ ವಜಾಗೊಳಿಸಬಹುದಾಗಿದೆ. ನಿಯಮಾನುಸಾರ ಮುಂದಿನ ಕ್ರಮವಹಿಸಲು ಪ್ರಶಾಸನ ಸಮಿತಿಯ ಅವಗಾಹನೆಗೆ ಮಂಡಿಸಿದೆ. |
| | ನಿರ್ಣಯ | **ಅನಧಿಕೃತ ಗೈರುಹಾಜರಾಗಿರುವ ಬಗೆಗೆ ಈ ಕೂಡಲೇ ಆಂತರಿಕ ವಿಚಾರಣೆಯನ್ನು ನಡೆಸಿ, ವರದಿಯ ಆಧಾರದ ಮೇಲೆ ನೌಕರನ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕೆಂದು ಸಭೆಯು ತೀರ್ಮಾನಿಸಿತು ಹಾಗೂ ಈ ಸಂಬಂಧ ಸರ್ಕಾರಕ್ಕೆ ಪ್ರಶಾಸನ ಸಮಿತಿಯ ನಿರ್ಣಯವನ್ನು ತಿಳಿಸಬೇಕೆಂದು ಸೂಚಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು:** | | |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಾಲ್ಕನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭದ ಒಟ್ಟು ವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಾಲ್ಕನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭವು ದಿನಾಂಕ: 02.12.2015ರಂದು ಯಶಸ್ವಿಯಾಗಿ ನಡೆಯಿತು. ಘನತೆವೆತ್ತ ರಾಜ್ಯಪಾಲರು ಮತ್ತು ಉನ್ನತ ಶಿಕ್ಷಣ ಸಚಿವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಈ ಸಮಾರಂಭಕ್ಕೆ ರೂ. 7.05 ಲಕ್ಷಗಳು (ಏಳು ಲಕ್ಷದ ಐದು ಸಾವಿರ ರೂಪಾಯಿ ಮಾತ್ರ) ವೆಚ್ಚವಾಗಬಹುದೆಂದು ಅಂದಾಜಿಸಿ, ದಿನಾಂಕ: 08.09.2015ರಂದು ನಡೆದ ಪ್ರಶಾಸನ ಸಮಿತಿ 28ನೇ ಸಭೆಯಲ್ಲಿ ಅಂದಾಜು ಮೊತ್ತಕ್ಕೆ ಅನುಮೋದನೆಯನ್ನು ಪಡೆಯಲಾಗಿತ್ತು. ಆದರೆ, ಈ ಸಮಾರಂಭಕ್ಕೆ ಒಟ್ಟು ಮೊತ್ತ ರೂ. 2,64,356/– (ಎರಡು ಲಕ್ಷದ ಅರವತ್ತನಾಲ್ಕು ಸಾವಿರದ ಮೂರುನೂರ ಐವತ್ತಾರು ರೂಪಾಯಿ ಮಾತ್ರ)ಗಳು ವೆಚ್ಚವಾಗಿದ್ದು, ವಿವರಗಳನ್ನು ಲಗತ್ತಿಸಿದೆ. ಈ ವೆಚ್ಚಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ನಾಲ್ಕನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ವೆಚ್ಚವಾದ ಮೊತ್ತ ರೂ. 2,64,356/–ಗಳಿಗೆ ಸಭೆಯು ಒಪ್ಪಿಗೆಯನ್ನು ನೀಡಿತು. ಕಡಿಮೆ ಮೊತ್ತವನ್ನು ಖರ್ಚು ಮಾಡಿರುವುದಕ್ಕೆ ಕುಲಪತಿಗಳು ಹಾಗೂ ಕುಲಸಚಿವರನ್ನು ಸಭೆಯು ಅಭಿನಂದಿಸಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸಿದ ವಲಯ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳ ವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.**<br>ರಾಜ್ಯದ ಸಂಸ್ಕೃತ ಪಾಠಶಾಲೆ/ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು 2015–16ನೇ ಸಾಲಿನಲ್ಲಿ ವಲಯ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಿತು. ಈ ಸ್ಪರ್ಧೆಗಳ ಆಯೋಜನೆಗಾಗಿ ರೂ. 3,70,000/–ಗಳನ್ನು ಮುಂಗಡ ಪಡೆಯಲಾಗಿತ್ತು. ಈ ಸ್ಪರ್ಧೆಗಳಿಗೆ ಒಟ್ಟು ಮೊತ್ತ ರೂ. 2,45,899/– (ಎರಡು ಲಕ್ಷದ ನಲವತ್ತೈದು ಸಾವಿರದ ಎಂಟುನೂರ ತೊಂಭತ್ತೊಂಭತ್ತು ರೂಪಾಯಿ ಮಾತ್ರ)ಗಳು ವೆಚ್ಚವಾಗಿದ್ದು, ವಿವರಗಳನ್ನು ಲಗತ್ತಿಸಿದೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸಿದ ಸ್ಪರ್ಧೆಗಳಿಗೆ ತಗುಲಿದ ವೆಚ್ಚಕ್ಕೆ ಸಭೆಯು ಒಪ್ಪಿಗೆಯನ್ನು ಸೂಚಿಸಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಶ್ರೀಮತಿ ಸಾವಿತ್ರಿ ಚಂದ್ರಪ್ಪ ಮಡಿವಾಳರ, ಸಹಾಯಕ ಪ್ರಾಧ್ಯಾಪಕರು, ಸಿ.ಎಲ್.ವೈ. ಸಂಸ್ಕೃತ ಕಾಲೇಜು–ಇವರು ಅಮೆರಿಕಾ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗೆಗೆ.**<br>ಶ್ರೀಮತಿ ಸಾವಿತ್ರಿ ಚಂದ್ರಪ್ಪ ಮಡಿವಾಳರ, ಸಹಾಯಕ ಪ್ರಾಧ್ಯಾಪಕರು, ವ್ಯಾಕರಣಶಾಸ್ತ್ರ, ಸಿ.ಎಲ್.ವೈ. ಸಂಸ್ಕೃತ ಕಾಲೇಜು, ಧಾರವಾಡ –ಇವರು ವಿದೇಶದಲ್ಲಿರುವ ತಮ್ಮ ಮಗನನ್ನು ಭೇಟಿ ಮಾಡಲು ಬೇಸಿಗೆ ರಜೆ ಅವಧಿ ಮತ್ತು ವೇತನರಹಿತ ರಜೆ(ದಿನಾಂಕ: 01.06.2016ರಿಂದ 25.09.2016)ಯನ್ನು ಪಡೆದು, ದಿನಾಂಕ: 10.04.2016ರಿಂದ 25.09.2016ರವರೆಗೆ ಅಮೆರಿಕಾ ಪ್ರವಾಸ ಮಾಡಲು ಅನುಮತಿ ನೀಡುವಂತೆ ಮನವಿ ಮಾಡಿರುತ್ತಾರೆ. ಇವರಿಗೆ ವೇತನರಹಿತ ರಜೆಯನ್ನು ಮಂಜೂರು ಮಾಡಲು ಹಾಗೂ ಅಮೆರಿಕಾ ಪ್ರವಾಸ ಕೈಗೊಳ್ಳಲು ಅನುಮತಿ ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಶ್ರೀಮತಿ ಸಾವಿತ್ರಿ ಚಂದ್ರಪ್ಪ ಮಡಿವಾಳರ ಅವರು ಅಮೆರಿಕಾ ಪ್ರವಾಸ ಮಾಡಲು ಹಾಗೂ ಅವರಿಗೆ ವೇತನರಹಿತ ರಜೆ ನೀಡಲು ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ಪ್ರೊ. ವೈ.ಎಸ್. ಸಿದ್ದೇಗೌಡ, ಕುಲಸಚಿವರು –ಇವರು ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಯ 'ಪದವಿ ಸಮಾರಂಭ'ದಲ್ಲಿ ಭಾಗವಹಿಸುತ್ತಿರುವ ಬಗೆಗೆ.**<br>ಪ್ರೊ. ವೈ.ಎಸ್. ಸಿದ್ದೇಗೌಡ, ಕುಲಸಚಿವರು –ಇವರ ಪುತ್ರ ವೈ.ಎಸ್. ದರ್ಶನ್ ಅವರು ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ತಮ್ಮ ಮಾಸ್ಟರ್ಸ್ ಡಿಗ್ರಿಯನ್ನು ಪೂರ್ಣಗೊಳಿಸಿರುತ್ತಾರೆ. ಈ ವಿಶ್ವವಿದ್ಯಾಲಯದ 'ಪದವಿ ಸಮಾರಂಭ'ವು ದಿನಾಂಕ: 17.05.2016ರಂದು ನಡೆಯಲಿದೆ. ಈ ಸಮಾರಂಭದಲ್ಲಿ ಭಾಗವಹಿಸಲು ಪ್ರೊ. ವೈ.ಎಸ್. ಸಿದ್ದೇಗೌಡ ಅವರು ತಮ್ಮ ಹಕ್ಕಿನಲ್ಲಿರುವ ಅರ್ಧವೇತನ |

| | | |
|---|---|---|
| | | ರಜೆಯನ್ನು ಬಳಸಿಕೊಂಡು, ಸ್ವಂತ ಖರ್ಚಿನಲ್ಲಿ ದಿನಾಂಕ: 12.05.2016ರಿಂದ 21.05.2016ರವರೆಗೆ ಕ್ಯಾಲಿಫೋರ್ನಿಯಾಕ್ಕೆ ತೆರಳುತ್ತಿದ್ದಾರೆ. ಪ್ರಶಾಸನ ಸಮಿತಿಯ ಅನುಮತಿಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಪ್ರೊ. ವೈ.ಎಸ್. ಸಿದ್ದೇಗೌಡ ಅವರು ತಮ್ಮ ಹಕ್ಕಿನ ರಜೆಯನ್ನು ಉಪಯೋಗಿಸಿ ಹಾಗೂ ತಮ್ಮ ಸ್ವಂತ ಖರ್ಚಿನಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಗೆ ಹೋಗಿಬರಲು ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ ಸದಸ್ಯರಾದ ವಿದ್ವಾನ್ ಕೆ. ಭೀಮಪ್ಪ ಅವರು ನೀಡಿರುವ ಪತ್ರದ ಬಗೆಗೆ.**<br>ಪ್ರಶಾಸನ ಸಮಿತಿಯ ಸದಸ್ಯರಾದ ವಿದ್ವಾನ್ ಕೆ. ಭೀಮಪ್ಪ ಅವರು ಕುಲಪತಿಗಳಿಗೆ ಪತ್ರ(ಕ್ರ.ಸಂ.: 12/2016; ದಿನಾಂಕ: 08.02.2016)ವನ್ನು ಬರೆದು ಕೆಲವು ವಿಷಯಗಳ ಬಗೆಗೆ ಪ್ರಶಾಸನ ಸಮಿತಿ ಸಭೆಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡುವಂತೆ ತಿಳಿಸಿರುತ್ತಾರೆ. ಅವರು ಬರೆದಿರುವ ಪತ್ರವನ್ನು ಚರ್ಚೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಸದಸ್ಯರಾದ ವಿದ್ವಾನ್ ಕೆ. ಭೀಮಪ್ಪ ಅವರ ಪತ್ರದಲ್ಲಿನ ಎಲ್ಲ ವಿಷಯಗಳನ್ನು ಪರಿಶೀಲಿಸಿತು. ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮಿತಿಯ ಅಧ್ಯಕ್ಷರಾಗಿರುವ ಪ್ರಯುಕ್ತ, ಪಾಠಶಾಲೆಗಳ ಶಿಕ್ಷಕರ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ವಿಷಯವನ್ನು ಅವರ ಗಮನಕ್ಕೆ ತರದೇ ನೇಮಕ ಮಾಡಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು. ಆ ಸಂಬಂಧವಾಗಿ ವಿಶ್ವವಿದ್ಯಾಲಯವು ಕೈಗೊಂಡ ಎಲ್ಲಾ ಕ್ರಮಗಳನ್ನು ಅವರ ಗಮನಕ್ಕೆ ತರಬೇಕೆಂದು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು. ಎಲ್ಲಾ ಪಾಠಶಾಲೆ ಮತ್ತು ಕಾಲೇಜುಗಳಿಗೆ ಸುತ್ತೋಲೆಯನ್ನು ಹೊರಡಿಸಿ, ಪ.ಜಾ. ಮತ್ತು ಪ.ಪಂ. ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಬರುವ ವಿದ್ಯಾರ್ಥಿವೇತನ ಮತ್ತು ಇನ್ನಿತರೆ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಪ್ರಾಚಾರ್ಯರಿಗೆ ಮತ್ತು ಮುಖ್ಯೋಪಾಧ್ಯಾಯರಿಗೆ ಸೂಚಿಸಬೇಕೆಂದು ಸಭೆಯು ತಿಳಿಸಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ICT Initiatives ಕಾರ್ಯಗತಗೊಳಿಸುತ್ತಿರುವ ಬಗೆಗೆ.**<br>ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಭರತ್ ಲಾಲ್ ಮೀನಾ ಅವರು ಮಾನ್ಯ ಕುಲಪತಿಗಳಿಗೆ ಪತ್ರವನ್ನು ಬರೆದು, ಉನ್ನತ ಶಿಕ್ಷಣ ಇಲಾಖೆಯ **ICT Initiatives** ಅನ್ನು ಕಾರ್ಯಗತಗೊಳಿಸುವಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕೈಗೊಂಡಿರುವ ಪರಿಣಾಮಕಾರಿಯಾದ ಕ್ರಮಗಳನ್ನು ಪರಿಶೀಲಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ ಹಾಗೂ ಇದೇ ರೀತಿ ಇನ್ನು ಮುಂದೆಯೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಅವರು ಬರೆದಿರುವ ಪತ್ರವನ್ನು ಪ್ರಶಾಸನ ಸಮಿತಿಯ ಅವಗಾಹನೆಗಾಗಿ ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ICT Initiatives ಅನ್ನು ಕಾರ್ಯಗತಗೊಳಿಸುವಲ್ಲಿ ಗಣನೀಯ ಪ್ರಗತಿ ಸಾಧಿಸಿರುವ ಸಲುವಾಗಿ ಅಪರ ಮುಖ್ಯ ಕಾರ್ಯದರ್ಶಿಗಳ ಪತ್ರಕ್ಕೆ ಸಂತೋಷ ವ್ಯಕ್ತಪಡಿಸಿ, ಆ ಕಾರ್ಯದಲ್ಲಿ ಹೆಚ್ಚು ಆಸಕ್ತಿ ವಹಿಸಿ ಪ್ರಶಂಸೆಗೆ ಪಾತ್ರರಾಗಿರುವ ಕುಲಸಚಿವರನ್ನು ಸಭೆಯು ಅಭಿನಂದಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಶ್ರೀ ದಿವಾಕರ್ ಕೆ.ಬಿ., ವಾಹನ ಚಾಲಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ –ಇವರು ಮೆ॥ ಅಂಜನಾದ್ರಿ ಎಂಟರ್‌ಪ್ರೈಸಸ್, ಬೆಂಗಳೂರು ಈ ಸಂಸ್ಥೆಗೆ ವಂಚಿಸಿರುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾಹನಗಳಿಗೆ ಮೆ॥ ಅಂಜನಾದ್ರಿ ಎಂಟರ್‌ಪ್ರೈಸಸ್, ಬೆಂಗಳೂರು –ಇಲ್ಲಿ ಇಂಧನವನ್ನು ಖರೀದಿಸಲಾಗುತ್ತಿದ್ದು, ಈ ಬಂಕ್‌ನ ಮಾಲೀಕರಾದ ದಿನಾಂಕ: 18.02.2016ರಂದು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, 2014ರ ಜುಲೈ ತಿಂಗಳಿನಿಂದ 2016ರ ಜನವರಿ ತಿಂಗಳವರೆಗೆ ಒಟ್ಟು ರೂ. 2,92,903/– ರೂಪಾಯಿಗಳ ವ್ಯತ್ಯಾಸ ಕಂಡುಬಂದಿದ್ದು ವಾಹನ ಚಾಲಕರಾದ ಕೆ.ಬಿ. ದಿವಾಕರ್ ಮತ್ತು ಪೆಟ್ರೋಲ್ ಬಂಕ್ ಮ್ಯಾನೇಜರ್ ಇಬ್ಬರೂ ಸೇರಿ ವಿಶ್ವವಿದ್ಯಾಲಯದ ಕುಲಸಚಿವರ ಮೊಹರನ್ನು ಬಳಸಿಕೊಂಡು, ಪೆಟ್ರೋಲ್ ಬಂಕ್‌ಗೆ ವಂಚಿಸಿರುವುದಾಗಿ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರಿಗೆ ಮೌಖಿಕ ದೂರನ್ನು ನೀಡಿದ್ದರು. ಈ ಬಗ್ಗೆ ಲಿಖಿತವಾಗಿ ದೂರನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ, ಮಾಲೀಕರು ಲಿಖಿತ ದೂರನ್ನು ನೀಡದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದಿಂದ ಮತ್ತೆ ಪತ್ರವನ್ನು ಬರೆದು, ಲಿಖಿತ ದೂರನ್ನು ನೀಡುವಂತೆ ತಿಳಿಸಲಾಗಿತ್ತು. ಅನಂತರ ಸಂಸ್ಥೆಯವರು ಲಿಖಿತ ದೂರನ್ನು ಸಲ್ಲಿಸಿದ್ದು, ದೂರಿನಲ್ಲಿ "ನಿಮ್ಮ ಇಲಾಖೆಯ ಚಾಲಕರಾದ ಕೆ.ಬಿ. ದಿವಾಕರ್ ಹಾಗೂ ನಮ್ಮ ಸಿಬ್ಬಂದಿಯಾದ ಮುತ್ತುರಾಜು ಹಾಗೂ ಇತರರು ಶಾಮೀಲಾಗಿ ಸುಮಾರು ರೂ. 2,90,000/– (ಎರಡು ಲಕ್ಷದ ತೊಂಬತ್ತು ಸಾವಿರ ರೂಪಾಯಿ)ಗಳಷ್ಟು ನಮ್ಮ ಬಂಕಿನ ಹಣವನ್ನು ದುರುಪಯೋಗ ಮಾಡಿರುವುದು ಕಂಡುಬಂದಿರುತ್ತದೆ. ಆದರೆ ಇದರಲ್ಲಿ ನಿಮ್ಮ ಇಲಾಖೆಯ ಹಣದಲ್ಲಿ ದುರುಪಯೋಗ ವಾಗಿರುವುದಿಲ್ಲ. ನಿಮ್ಮ ದಿವಾಕರ್ ಮತ್ತು ನಮ್ಮ ಮ್ಯಾನೇಜರ್ ಆದ ಮುತ್ತುರಾಜ್ ಇವರುಗಳು ಮಾಡಿರುವ ವಂಚನೆಯಿಂದ ನಮ್ಮ ಸಂಸ್ಥೆಗೆ ಹಾನಿಯಾಗಿರುತ್ತದೆ. ಆದರೆ ನಿಮ್ಮ ಇಲಾಖೆಯಿಂದ ನಮಗೆ ಯಾವುದೇ ತೆರನಾದ ಬಾಕಿ ಇರುವುದಿಲ್ಲ" ಎಂದು ತಿಳಿಸಿರುತ್ತಾರೆ. ಆದರೆ, ವಾಹನ ಚಾಲಕರಾದ ಕೆ.ಬಿ. ದಿವಾಕರ್ ಅವರು ಯಾವ ರೀತಿಯ ವಂಚನೆ ಎಸಗಿರುತ್ತಾರೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ. ಕೆ.ಬಿ. ದಿವಾಕರ್ ಅವರು ಯಾವ ಆಧಾರದ ಮೇಲೆ ವಂಚನೆಯನ್ನು ಎಸಗಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡಲು ಹಾಗೂ ಸೂಕ್ತ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಪೆಟ್ರೋಲ್ ಬಂಕ್ |

| | | |
|---|---|---|
| | | ಮಾಲೀಕರಿಗೆ ಮತ್ತೊಮ್ಮೆ ಪತ್ರವನ್ನು ಬರೆಯಲಾಗಿದೆ. ಮುಂದಿನ ಕ್ರಮಕೈಗೊಳ್ಳಲು ಪ್ರಶಾಸನ ಸಮಿತಿಯ ಸೂಕ್ತ ನಿರ್ದೇಶನಕ್ಕಾಗಿ ಈ ವಿಷಯವನ್ನು ಮಂಡಿಸಿದೆ. |
| | ನಿರ್ಣಯ | **ವಾಹನ ಚಾಲಕನಾದ ಕೆ.ಬಿ. ದಿವಾಕರ್ ಅವರು ವಿಶ್ವವಿದ್ಯಾಲಯದ ಕುಲಸಚಿವರ ಮೊಹರನ್ನು ಸ್ವಂತಕ್ಕೆ ಬಳಸಿರುವುದು ಕ್ರಿಮಿನಲ್ ಅಪರಾಧವಾಗಿದ್ದು, ವಿಶ್ವವಿದ್ಯಾಲಯದ ಘನತೆಗೆ ಧಕ್ಕೆ ತಂದಿರುವ ಹಿನ್ನೆಲೆಯಲ್ಲಿ, ಅವರನ್ನು ಈ ಕೂಡಲೇ ಅಮಾನತ್ತುಗೊಳಿಸಿ, ಆಂತರಿಕ ವಿಚಾರಣೆಯನ್ನು ನಡೆಸಲು ಸಭೆಯು ತೀರ್ಮಾನಿಸಿತು. 45 ದಿನಗಳ ಒಳಗಾಗಿ ವಿಚಾರಣೆಯನ್ನು ನಡೆಸಿ, ವರದಿಯ ಆಧಾರದ ಮೇಲೆ ಕ್ರಮವಹಿಸಬೇಕೆಂದು ಸೂಚಿಸಿತು.** |

**ಮಾನ್ಯ ಸದಸ್ಯರುಗಳು ವಿಶ್ವವಿದ್ಯಾಲಯದ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಪ್ರಸಾರಾಂಗ ವಿಭಾಗಗಳನ್ನು ಬಲಿಷ್ಠಗೊಳಿಸಬೇಕೆಂದು ತಿಳಿಸಿ, ಈ ಸಂಬಂಧವಾಗಿ ಎಲ್ಲಾ ಅಧ್ಯಾಪಕರುಗಳ ಮತ್ತು ಯೋಜನಾ ಸಹಾಯಕರುಗಳ ಶೈಕ್ಷಣಿಕ ಕಾರ್ಯಪ್ರಗತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಬೇಕೆಂದು ತಿಳಿಸಿದರು. ಅದೇ ರೀತಿ, ಪ್ರಸಾರಾಂಗವು ಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡುವಂತೆ ಸೂಚಿಸಬೇಕೆಂದು ಹಾಗೂ ಪ್ರತಿಯೊಬ್ಬ ನೌಕರನು ನಿರ್ವಹಿಸುತ್ತಿರುವ ಕಾರ್ಯದ ಪ್ರಗತಿಯ ಬಗ್ಗೆ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಬೇಕೆಂದು ಸಭೆಯು ತಿಳಿಸಿತು.**

| | |
|---|---|
| **ಪ್ರೊ. ವೈ.ಎಸ್. ಸಿದ್ದೇಗೌಡ** | **ಪ್ರೊ. ಪದ್ಮಾಶೇಖರ್** |
| ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು |